# ಯುವ ರಾಜ್‌ಗೆ ಸೂರಿ ಆ್ಯಕ್ಷನ್-ಕಟ್



ಬಹಳ ದಿನಗಳಿಂದ ಕುತೂಹಲ ಮೂಡಿಸಿದ್ದ ಯುವ–ಸೂರಿ ಕಾಂಬಿನೇಷನ್ ಸಿನಿಮಾ ಸೆಟ್ಟೇರಿದ್ದು, ನಿರ್ದೇಶಕ ಸೂರಿ ದೊಡ್ಮನೆ ಹುಡುಗ 'ಯುವ'ಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಪಿಆರ್‌ಕೆ, ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ರಾಜ್ ಒಡೆತನದ ಕೆಆರ್‌ಜಿ ಹಾಗೂ ಜಯಣ್ಣ–ಭೋಗಣ್ಣ ಅವರ ಜಯಣ್ಣ ಫಿಲ್ಮಂಸ್ ಬ್ಯಾನರ್‌ನಡಿ 'ಎಕ್ಕ' ಸಿನಿಮಾ ಅದ್ದೂರಿಯಾಗಿ ತಯಾರಾಗುತ್ತಿದೆ. ಈ ಚಿತ್ರ ಬಿಡುಗಡೆಗೂ ಮುನ್ನವೇ ಇದೇ ಪ್ರೊಡಕ್ಷನ್ಸ್‌ನಡಿ ಈ ಹೊಸ ಸಿನಿಮಾ ಘೋಷಣೆಯಾಗಿದೆ.



'ಜಾಕಿ', 'ಅಣ್ಣಾ ಬಾಂಡ್', 'ಟಗರು' ಸಿನಿಮಾ ನಿರ್ದೇಶಕ ಸೂರಿ ರಾ ಸ್ಟೈಲ್ ಮೇಕಿಂಗ್‌ಗೆ ಹೆಸರಾಗಿರುವವರು. ತಮ್ಮ ಕಥಾ ನಿರೂಪಣಾ ಶೈಲಿಯಿಂದ ಗುರುತಿಸಿಕೊಂಡಿರುವ ಅವರ ನಿರ್ದೇಶನದಲ್ಲಿ ಯುವ ಯಾವ ರೀತಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬ ಕುತೂಹಲದೊಂದಿಗೆ, ಮತ್ತೊಂದು ಹೊಸ ಅಂಶವೂ ಸಿನಿಮಾಗೆ ಜೊತೆಯಾಗಿದೆ.

ನಟ ದುನಿಯಾ ವಿಜಯ್ ಮೊದಲ ಪುತ್ರಿ ರಿತನ್ಯಾ ವಿಜಯ್ ಕುಮಾರ್ ಈ ಚಿತ್ರದ ನಾಯಕಿಯಾಗಿದ್ದಾರೆ.

ಈಗಾಗಲೇ ಅಪ್ಪನ ಜೊತೆ 'ಲ್ಯಾಂಡ್ ಲಾರ್ಡ್' ಸಿನಿಮಾ ಮೂಲಕ ಚಂದನವನಕ್ಕೆ ಅಡಿಯಿಟ್ಟಿರುವ ರಿತನ್ಯಾಗೆ ಇದು ಎರಡನೇ ಸಿನಿಮಾ. ಯುವ ರಾಜ್‌ಕುಮಾರ್‌ಗೆ ಇದು ಮೂರನೇ ಚಿತ್ರ. ಮೇ ತಿಂಗಳ ಕೊನೆಗೆ ಚಿತ್ರತಂಡ ಶೂಟಿಂಗ್ ಅಖಾಡಕ್ಕೆ ಇಳಿಯಲಿದೆ.

ಇದೇ ಜೂನ್‌ನಲ್ಲಿ ರೋಹಿತ್ ಪದಕಿ ನಿರ್ದೇಶನದಲ್ಲಿ ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಕೂಡ ರಿಲೀಸ್ ಆಗುತ್ತಿದ್ದು, ಈಗಾಗಲೇ ರಿಲೀಸ್ ಆಗಿರುವ ಟೀಸರ್ ಹಾಗೂ ಟೈಟಲ್ ಟ್ರ್ಯಾಕ್ ದೊಡ್ಡ ಮಟ್ಟದ ಹಿಟ್ ಕಂಡಿದೆ.



# ನಟನೆ-ನಿರ್ಮಾಣದಲ್ಲಿ ನಟೇಶ್ ಹೆಗಡೆ

'ಪೆದ್ರೊ', 'ವಾಘಚಿಪಾಣಿ' ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ನಿರ್ದೇಶಕ ನಟೇಶ್ ಹೆಗಡೆ ಹಾಗೂ 'ನೀಲಿ ಹಕ್ಕಿ' ಚಿತ್ರದ ನಿರ್ದೇಶಕ ಗಣೇಶ್ ಹೆಗಡೆ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದು, 'ಕುರ್ಕ' ಎನ್ನುವ ಶೀರ್ಷಿಕೆಯ ಈ ಸಿನಿಮಾ ಇದೇ ವರ್ಷ ತೆರೆಕಾಣುವ ಸಿದ್ಧತೆಯಲ್ಲಿದೆ.



ಸಿನಿಮಾ ಹೊನ್ನಾವರದಲ್ಲಿ ನಡೆಯುವ ಕಥೆಯಾಗಿದ್ದು, ಮಿಸ್ಟರಿ ಹಾಗೂ ಕ್ರೈಮ್ ಥ್ರಿಲ್ಲರ್ ಡ್ರಾಮಾ ಶೈಲಿಯಲ್ಲಿ ಮೂಡಿಬರುತ್ತಿದೆ. ಕಥೆ, ನಿರ್ದೇಶನದ ಜೊತೆಗೆ ಛಾಯಾಚಿತ್ರಗ್ರಹಣದ ಹೊಣೆ ಗಣೇಶ್ ಹೆಗಡೆ ಅವರದ್ದು. ನಟೇಶ್ ಹೆಗಡೆ ಸಿನಿಮಾದಲ್ಲಿ ನಟಿಸಿದ್ದು, ನಟ ವಿಜಯ ರಾಘವೇಂದ್ರ, ಅವಿನಾಶ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಸಂಗೀತ ನಿರ್ದೇಶಕ ಚರಣ್ ರಾಜ್ ಅವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. 2025ರಲ್ಲೇ ಈ ಸಿನಿಮಾ ತೆರೆಕಾಣಲಿರುವುದಾಗಿ ತಿಳಿದುಬಂದಿದೆ.

ಉದ್ಯಮಿ ರೇವಣ್ಣ ಎಚ್. ಅವರ 'ಅಘೋರ್ ಮೋಷನ್ ಪಿಕ್ಚರ್ಸ್' ಹಾಗೂ ನಟೇಶ್ ಹೆಗಡೆ ಮತ್ತು ಗಣೇಶ್ ಹೆಗಡೆ ಅವರ 'ಫಾಕ್ಸ್ ಆ್ಯಂಡ್ ಫ್ರೆಂಡ್ಸ್' ನಿರ್ಮಾಣ ಸಂಸ್ಥೆ ಒಟ್ಟಾಗಿ 'ಕುರ್ಕ' ಚಿತ್ರವನ್ನು ನಿರ್ಮಾಣ ಮಾಡುತ್ತಿವೆ. ಅನುಪಮಾ ಗೌಡ, ಜಹಾಗೀರ್ ಎಂ.ಎಸ್., ಜಿ.ಬಿ. ಭರತ್, ಸಿಂಧು ಹೇರೂರ್, ನಾಗರಾಜ್ ಹೆಗಡೆ, ಶ್ವೇತಾ ದೇಸಾಯಿ ಪಾತ್ರವರ್ಗದಲ್ಲಿ ಇದ್ದಾರೆ. ನಟೇಶ್ ಹೆಗಡೆ ನಟನೆಯ ಜೊತೆಗೆ ಸಂಕಲನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.